**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.208/2024**

| | | |
|---|---|---|
| ಸಾಕ್ಷಿದಾರರ ಹೆಸರು | : ರಶ್ಮೀ | ಪ್ರಾಸಾ-10 |
| ಗಂಡನ ಹೆಸರು | : ಶರವಣ | ಚಾಸಾ-8 |
| ವಯಸ್ಸು | : 31 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಗೃಹಿಣಿ | ದಿನಾಂಕಃ 06.01.2026. |
| ವಾಸಸ್ಥಳ | : ಭದ್ರಾವತಿ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಚಾಸಾ-7 ನನ್ನ ತಾಯಿ. ಚಾಸಾ-6 ನನ್ನ ಅತ್ತೆ. ಚಾಸಾ-5 ಪರಿಚಯಸ್ಥರು. ಚಾಸಾ-9 ನನ್ನ ಸಂಬಂಧಿಕರು.

ದಿ.07.07.2023 ರಂದು ಬೆ.10.00 ರಿಂದ 10.30 ರ ಸಮಯದಲ್ಲಿ ಭದ್ರಾವತಿಯಿಂದ ಧರ್ಮಸ್ಥಳಕ್ಕೆ ಸಂಚರಿಸುವ KA-21-F-0251 ಎಂಬ KSRTC ಬಸ್ ಗೆ ನಾನು ಚಾಸಾ-5 ರಿಂದ 7 ಮತ್ತು 9 ರವರು ಪ್ರಯಾಣಿಸುತ್ತಿರುತ್ತೇವೆ. ನಂತರ ಮೂಡಿಗೆರೆಯಿಂದ ಊಟ ಮಾಡಿ ಹೊರಟ ನಂತರ ಮ.3.00 ರಿಂದ 3.30 ರ ಸಮಯದಲ್ಲಿ ಚಾರ್ಮಡಿ ಘಾಟ್ ನ ರಸ್ತೆಯ ಬಳಿ ನಾವುಗಳು ಪ್ರಯಾಣಿಸುತ್ತಿದ್ದ ಸರ್ಕಾರಿ ಬಸ್ ಮತ್ತು ಎದುರಿನಿಂದ ಬಂದಂತಹ ಇನ್ನೊಂದು ಸರ್ಕಾರಿ ಬಸ್ ಮುಖಾ ಮುಖಿಯಾಗಿ ಅಪಘಾತ ಸಂಭವಿಸಿರುತ್ತದೆ. ಸದರಿ ಅಪಘಾತದಲ್ಲಿ ನನ್ನ ಬಲಗೈ ಮತ್ತು ಬಲಗಾಲಿಗೆ ಪೆಟ್ಟಾಗಿದ್ದು, ನನ್ನೊಟ್ಟಿಗೆ ಬಂದಂತಹ ಇತರರಿಗೂ ಗಾಯವಾಗಿರುತ್ತದೆ. ನಂತರ ಅಲ್ಲೇ ಇದ್ದ ಸಾರ್ವಜನಿಕರು ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಗೆ ವಿಷಯ ತಿಳಿಸಿ ಆ್ಯಂಬುಲೆನ್ಸ್ ವಾಹನವನ್ನು ಕರೆಸಿರುತ್ತಾರೆ. ನಂತರ ಮೂಡಿಗೆರೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ನಂತರ ಭದ್ರಾವತಿಯ ಮೀನಾ ನರ್ಸಿಂಗ್ ಹೋಮ್ ನಲ್ಲಿ ನಾವು ಹೆಚ್ಚಿನ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ.

ನಂತರ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಠಾಣೆಯಲ್ಲಿ ದೂರು ದಾಖಲಾಗಿರುವ ಬಗ್ಗೆ ಮೂಡಿಗೆರೆ ಪೋಲಿಸ್ ಠಾಣೆಯಿಂದ ನಮಗೆ ವಿಷಯ ತಿಳಿಯುತ್ತದೆ. ನನಗೆ ಪೋಲಿಸರು ದೂರವಾಣಿಯ ಮುಖಾಂತರ ಕರೆ ಮಾಡಿದಾಗ ನಡೆದ ಘಟನೆಯ ಬಗ್ಗೆ ತಿಳಿಸಿರುತ್ತೇನೆ. ನಾವು ಪ್ರಯಾಣಿಸುತ್ತಿದ್ದ ಬಸ್ ನ ಚಾಲಕರ ನಿರ್ಲಕ್ಷ್ಯತನದಿಂದ ಸದರಿ ಅಪಘಾತವು ಸಂಭವಿಸಿರುತ್ತದೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ನೋಡಿರುವುದಿಲ್ಲ. ಸಾಕ್ಷಿಯು ನಿಪಿ-4 ರಲ್ಲಿ ಕಾಣುವ ಕಂಡುಬರುತ್ತಿರುವ ಬಸ್ ನಾನು ಪ್ರಯಾಣಿಸಿದ್ದ ಬಸ್ಸಾಗಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**<u>ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

KA-21-F-0251 ಎಂಬ KSRTC ಬಸ್ ನ್ನು ಅಪಘಾತ ಸಂಭವಿಸಿದ ದಿನ ನ್ಯಾಯಾಲಯದ ಮುಂದಿರುವ ಆರೋಪಿಯು ಚಲಾಯಿಸುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಸರಿಯಾಗಿ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಆ ದಿನ ನಾನು ಪ್ರಯಾಣಿಸುತ್ತಿದ್ದ ಬಸ್ ಅತಿವೇಗ ಮತ್ತು ಅಜಾಗ್ರುಕತೆಯಿಂದ ಚಲಾಯಿಸುತ್ತಿತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾವು ಆ ದಿನ ಪ್ರಯಾಣಿಸುತ್ತಿದ್ದ ಬಸ್ ನ್ನು ನ್ಯಾಯಾಲಯದ ಮುಂದಿರುವ ಆರೋಪಿಯು ಅತಿವೇಗ ಮತ್ತು ಅಜಾಗ್ರುಕತೆಯಿಂದ ಚಲಾಯಿಸಿ ಎದುರು ದಿಕ್ಕಿನಿಂದ ಬಂದ KA-17-F-1901 ಎಂಬ ಬಸ್ ಗೆ ಡಿಕ್ಕಿ ಪಡಿಸಲಾಗಿತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆ ದಿನ ನಾನು ಪ್ರಯಾಣಿಸುತ್ತಿದ್ದ ಬಸ್ ನ್ನು ನ್ಯಾಯಾಲಯದ ಮುಂದಿರುವ ಆರೋಪಿಯು ಚಲಾಯಿಸುತ್ತಿದ್ದರು ಎಂಬ ವಿಷಯ ತಿಳಿದಿದ್ದರು ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಸಂಬಂಧಿಸಿದಂತೆ ಚಾಸಾ-1 ರವರು ದೂರು ನೀಡಿರುತ್ತಾರೆ ಎಂದರೆ ಸಾಕ್ಷಿಯು ದೂರು ನೀಡಿರುವುದು ತಿಳಿದಿರುತ್ತದೆ ಆದರೆ ಅವರ ಹೆಸರು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದಿ.156.07.2023 ರಂದು ಪೋಲಿಸ್ ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದಃ</u>**

ದಿ.07.07.2023 ರ ನಂತರ ಇದೇ ಮೊದಲನೇ ಬಾರಿಗೆ ನಾನು ಮೂಡಿಗೆರೆಗೆ ಬಂದಿರುತ್ತೇನೆ ಎಂದರೆ ಸರಿ. ನನಗೆ ಪೋಲಿಸರು ದೂರವಾಣಿ ಮುಖಾಂತರ ವಿಷಯವನ್ನು ತಿಳಿಸಿದ ಹೊರತು ನಾನು ಕುದ್ದಾಗಿ ಬಣಕಲ್ ಪೋಲಿಸ್ ಠಾಣೆ ಅಥವಾ ಮೂಡಿಗೆರೆ ಪೋಲಿಸ್ ಠಾಣೆಗೆ ದಿ.15.07.2023 ರಂದು ಭೇಟಿ ನೀಡಿರುವುದಿಲ್ಲ ಎಂದರೆ ಸರಿ. ಬಸ್ ನ ಮದ್ಯದ ಬಲ ಭಾಗದಲ್ಲಿ ನಾನು ಕುಳಿತಿರುತ್ತೇನೆ. ಆ ದಿನ ಬಸ್ ನಲ್ಲಿ 40 ಕ್ಕೂ ಹೆಚ್ಚು ಮಂದಿ ಪ್ರಯಾಣಿಸುತ್ತಿದ್ದರು. ಸಾಮಾನ್ಯವಾಗಿ ಬಸ್ ನ ಚಾಲಕ ಅತಿವೇಗ ಮತ್ತು ಅಜಾಗ್ರುಕತೆಯಿಂದ ಬಸ್ ನ್ನು ಚಲಾಯಿಸಿದ್ದಲ್ಲಿ ನಾವು ಅವರಿಗೆ ನಿಧಾನವಾಗಿ ಚಲಿಸುವಂತೆ ತಿಳಿಸುತ್ತೇವೆ ಎಂದರೆ ಸರಿ. ನಿಡಿ-1 ಮತ್ತು 2 ಅಪಘಾತ ಸಂಬಂವಿಸಿದ ಸ್ಥಳದಲ್ಲಿ ಇದ್ದಂತಹ ಬಸ್ ಗಳ ಫೋಟೋಗಳು ಎಂದರೆ ಸರಿ. ನಿಡಿ-1 ಮತ್ತು 2 ರಲ್ಲಿ ಎದುರು ದಿಕ್ಕಿನಿಂದ ಬಂದಂತಹ ಬಸ್ ನ ಎಡಭಾಗದಲ್ಲಿ ಒಂದು ವಾಹನ ಚಲಾಯಿಸುವಂತಹ ಜಾಗವಿರುತ್ತದೆ ಎಂದರೆ ಸರಿ. ನಿಡಿ-1 ಮತ್ತು 2 ರ ಪ್ರಕಾರ ಎದುರು ದಿಕ್ಕಿನಿಂದ ಬಂದಂತಹ ಬಸ್ ಎಡಭಾಗದಲ್ಲಿ ಚಲಿಸಿದ್ದರೆ ಅಪಘಾತ ಸಂಭವಿಸುತ್ತಿರಲ್ಲಿಲ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿ ನಾವು ಪ್ರಯಾಣಿಸುತ್ತಿದ್ದ ಬಸ್ ನ ಬಲಭಾಗಕ್ಕೆ 10 ಅಡಿ ಡಾಂಬಾರು ರಸ್ತೆ ಕಂಡುಬರುತ್ತಿದೆ ಎಂದರೆ ಸರಿ.

ನಾವು ಆ ದಿನ ಪ್ರಯಾಣಿಸುತ್ತಿದ್ದ ಬಸ್ ನ ಎಡಭಾಗದಲ್ಲಿ ಆಳವಾದ ಪ್ರಪಾತಗಳು ಇದ್ದವು

ಎಂದರೆ ಸರಿ. ಆದರೆ ಎದುರು ದಿಕ್ಕಿನಿಂದ ಬುರುತ್ತಿದ್ದ ಬಸ್ ನ ಎಡಭಾಗಕ್ಕೆ ಬೆಟ್ಟ ಗುಡ್ಡಗಳು ಇದ್ದವು ಎಂದರೆ ಸರಿ. ನಿಡಿ-1 ಮತ್ತು 2 ರ ಪ್ರಕಾರ ಎದುರು ದಿಕ್ಕಿನಿಂದ ಬಂದ ಬಸ್ ಎಡಭಾಗಕ್ಕೆ ಚಲಾಯಿಸದೇ ಬಲಭಾಗಕ್ಕೆ ಬಂದ ಕಾರಣ ಅಪಘಾತ ಸಂಭವಿಸಿರುತ್ತದೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.